### ವಚನಸಾಹಿತ್ಯ

ಭಗವಂತನಲ್ಲಿ ಐಕ್ಯತೆಯನ್ನು ಸಾಧಿಸುವಲ್ಲಿ ಈ ಶರಣರು ಅನೇಕ ಸಂಕಷ್ಟಗಳನ್ನು ಎದುರಿಸಬೇಕಾಯಿತು. ಇದರ ವಿವರಣೆ ಅವರ ವಚನಗಳಲ್ಲಿ ಕಂಡುಬರುತ್ತದೆ. ಉದಾಹರಣೆಗಾಗಿ ಬಸವಣ್ಣನವರು, **"ಭಕ್ತಿಯೆನ್ನುವುದು ಕಷ್ಟಸಾಧ್ಯ; ಗರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು"** ಎಂದಿದ್ದಾರೆ. ಶರಣರು ಸಾಧನೆಯಲ್ಲಿ ಮುಂದುವರೆದು, ಬಳಿಕ ಎಲ್ಲರೂ ಸೇರಿ ವಿಚಾರಮಂಥನ ಮಾಡಿ ತಮ್ಮ ತಮ್ಮ ಅನುಭವವನ್ನು ಬಸವಣ್ಣನವರು ರೂಪಿಸಿದ ಅನುಭವಮಂಟಪದಲ್ಲಿ ಹಂಚಿಕೊಂಡರು. ಈ ಜ್ಞಾನ ನಾಡಿನ ಶ್ರೀಸಾಮಾನ್ಯನಿಗೂ ತಲುಪಬೇಕು ಎಂಬ ಆಶಯದಿಂದ ವಚನಗಳನ್ನು ರಚಿಸಲು ಪ್ರಾರಂಭಿಸಿದರು. ಇದರ ಫಲವಾಗಿ ಇಂದು ಕನ್ನಡದ ಸಾರಸ್ವತಲೋಕದಲ್ಲಿ **'ವಚನಸಾಹಿತ್ಯ'** ಒಂದು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ.

### ಸಿದ್ಧರಾಮರ ವಚನ

ಇನ್ನು ಮುಂದೆ ಬಸವಣ್ಣನವರ ಸಮಕಾಲೀನರಾದ ಸಿದ್ಧರಾಮೇಶ್ವರರು ರಚಿಸಿದ ಒಂದು ವಚನವನ್ನು ಅವಲೋಕಿಸೋಣ. ಅದು ಹೀಗಿದೆ:

**ಅರವತ್ತೆಂಟು ಸಹಸ್ರ ವಚನಂಗಳ**
**ಹಾಡಿ ಹಾಡಿ ಸೋತಿತೆನ್ನ ಮನ ನೋಡಯ್ಯ,**
**ಹಾಡುವುದು ಒಂದೇ ವಚನ, ನೋಡುವುದು ಒಂದೇ ವಚನ.**
**ವಿಷಯವ ಬಿಟ್ಟು ನಿರ್ವಿಷಯವಾಗುವುದು**
**ಒಂದೇ ವಚನ ನಮ್ಮ ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.**

ಈ ವಚನ ಮೇಲುನೋಟಕ್ಕೆ ನೇರ ಹಾಗೂ ಸರಳವಾಗಿ ಕಂಡರೂ ಇದರಲ್ಲಿ ವೇದ ಪುರಾಣ ಆಗಮ ಉಪನಿಷತ್ತುಗಳ ಸಾರವನ್ನೆಲ್ಲಾ ಸಿದ್ಧರಾಮರು ಗರ್ಭೀಕರಿಸಿದ್ದಾರೆ ಎಂದೆನ್ನಿಸುತ್ತದೆ. ಅವರು ಜ್ಞಾನಸಿದ್ಧಿ ಪಡೆದ ನಂತರ ಇದನ್ನು ರಚಿಸಿರುವಂತೆ ತೋರಿಬರುತ್ತದೆ. **'ಅರವತ್ತೆಂಟು ಸಾವಿರ ವಚನಂಗಳ ಹಾಡಿ ಹಾಡಿ ಸೋತಿತೆನ್ನ ಮನ'** ಎನ್ನುವುದು ಅವರ ದೀರ್ಘ ಸಾಧನೆಯ ಸಂಕೇತ. **'ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ'** ಎನ್ನುವ ಸಾಲು ಭಗವಂತನಲ್ಲಿ ಐಕ್ಯಭಾವವನ್ನು ತೋರಿಸುತ್ತದೆ. **'ಹಾಡುವುದು, ನೋಡುವುದು ಒಂದೇ ವಚನ'** ಎಂಬಲ್ಲಿ ವಚನಕಾರರು ಪೂರ್ಣ ಅದ್ವೈತ ಸಿದ್ಧಾಂತವನ್ನು ಸಮೀಕರಿಸಿದ್ದಾರೆ. **'ವಿಷಯವ ಬಿಟ್ಟು ನಿರ್ವಿಷಯವಾಗುವುದು'** ಎಂಬುದು ಈ ವಚನದ ಹೂರಣ.

ಪರಮಾತ್ಮನು ತನ್ನ ಸೃಷ್ಟಿಯ ಈ ಮೋಜಿನಾಟದಲ್ಲಿ ಎರಡು ವ್ಯವಸ್ಥೆಗಳನ್ನು ಕಲ್ಪಿಸಿದ್ದಾನೆ: ೧. ವಿಷಯ ಪ್ರಪಂಚ ಮತ್ತು ೨. ನಿರ್ವಿಷಯ ಪ್ರಪಂಚ. ವೀರಶೈವ ಪರಿಭಾಷೆಯಲ್ಲಿ ಇವುಗಳನ್ನು ಅನುಕ್ರಮವಾಗಿ **ಭೋಗ** ಮತ್ತು **ಯೋಗ** ಎಂದು ಕರೆಯಬಹುದು. ಜೀವಿಗಳ ಜೀವನವು ಭೋಗದಲ್ಲಿ ಪ್ರಾರಂಭವಾಗಿ ಕಡೆಗೆ ಯೋಗದಲ್ಲಿ ಮುಕ್ತಾಯವಾಗಬೇಕು. ಇದೇ ಈ ವಚನದ ಆಶಯ.

ತನ್ನ ಜೀವಿತದಲ್ಲಿ ಮಾನವನು 'ಹೆಣ್ಣು', 'ಹೊನ್ನು' ಮತ್ತು 'ಮಣ್ಣು'ಗಳಿಗೆ ಅಂಟಿಕೊಂಡಿರುತ್ತಾನೆ. ಈ ಮೂರರಲ್ಲಿ ಹೆಣ್ಣಿನ ಪ್ರಭಾವವೇ ಜಾಸ್ತಿ. ಹೆಣ್ಣನ್ನು ಮಾಯೆ ಎಂದು ಕರೆಯುತ್ತಾರೆ. ಆದರೆ ಅಕ್ಕಮಹಾದೇವಿಯು **"ಹೆಣ್ಣಿಗೆ ಗಂಡು ಮಾಯೆ, ಗಂಡಿಗೆ ಹೆಣ್ಣು ಮಾಯೆ"** ಎಂದು ಸಾರುತ್ತಾಳೆ. ಈ ಸಂಸಾರ ಚಕ್ರದಿಂದ ಬಿಡುಗಡೆಯಾಗಬೇಕಾದರೆ 'ವಿಷಯಿ'ಯಾದವನು 'ನಿರ್ವಿಷಯಿ'ಯಾಗಬೇಕು. ಇದಕ್ಕೆ ಭಗವಂತನ ಅನುಗ್ರಹ ಬೇಕು. ಇದೇ ಈ ವಚನದ ಉಪದೇಶ.

ಈ ಪ್ರಪಂಚದ ಜನರನ್ನು ಭೋಗದಿಂದ ಯೋಗಕ್ಕೆ ತರಲು ಹಲವಾರು ಮಹಾತ್ಮರು ಪ್ರಯತ್ನಿಸಿದ್ದಾರೆ. ಅಂಥವರಲ್ಲಿ ಸಿದ್ಧರಾಮರೂ ಒಬ್ಬರು. ಅವರ ಈ ವಚನವು ಸಾಧಕರಿಗೆ ಒಂದು ದಾರಿದೀಪವಾಗಿದೆ. ಇಂತಹ ವಚನಸಂಪತ್ತನ್ನು ಹೊಂದಿದ ನಮ್ಮ ನಾಡು ನಿಜಕ್ಕೂ ಧನ್ಯ.

### ಹೇ ಮನವೇ...

**ತೋ**ರಿ ಕೆಡುವ ದೇಹ ನಾನೆಂದು ನಂಬದಿರಾ ಮನವೆ
ತೋರುವ ಅರಿವು ನಾನೆಂದು ನಂಬು ಕಂಡ್ಯಾ ಮನವೆ.
ತೋರಿ ಕೆಡುವುದು ಮಾಯಾತ್ಮಕವು ಮನವೆ.
ತೋರಿ ತೋರುವುದು ನಿರುಪಾಧಿಕ ನಿಜಾನಂದ
ಕಪಿಲಸಿದ್ಧ ಮಲ್ಲಿಕಾರ್ಜುನ ಕಂಡ್ಯಾ ಮನವೆ.

**ದೇ**ಹ ನಾನೆಂದು ನಂಬಿದೆ ಎಲೆ ಮನವೆ !
ದೇಹದಲ್ಲಿನ ಗುಣಂಗಳು ನಿನ್ನಲ್ಲಿಲ್ಲ ಕಂಡ್ಯಾ ಮನವೆ,
ಪೃಥ್ವಿಯ ಗುಣ ಶಾಂತಿ, ಉದಕದ ಗುಣ ಸ್ವಾದ,
ಅಗ್ನಿಯ ಗುಣ ಸರ್ವಭಕ್ಷಣ,
ವಾಯುವಿನ ಗುಣ ನಿರ್ಮಲತ್ವ,
ಆಕಾಶದ ಗುಣ ನಿರ್ವಯಲು,
ಈ ಪಂಚತತ್ವದ ಗುಣ ನಿನ್ನಲ್ಲಿರಲು
ನೀನೇ ಪಂಚಮುಖ ನೋಡಾ ಮನವೆ,
ಕಪಿಲಸಿದ್ಧ ಮಲ್ಲಿಕಾರ್ಜುನಾ

**ಲಿಂ**ಗವೇ ಅಂಗವಾಗಿಹೆನೆಂಬುವನ ಭಾವ
ಇದರಲ್ಲೇ ನಿಶ್ಚಯ ನೋಡಾ.
ಮನವೇ, ನಿಂದಾಸ್ತುತಿಗಳಲ್ಲಿ ಹರ್ಷರೋಷಗಳಿಲ್ಲದಿರಬೇಕು.
ನೀಚಾನೀಚ ಗುಣವ ನೋಡದೆ
ನಮ್ರ ಭಾಷಾವಂತನಾಗಬೇಕು.
ಸರ್ವಜೀವಿಗಳ ತನ್ನಂತೆ ತಿಳಿದು ನೋಡಬೇಕು.
ಸಂಶಯಾಸಂಶಯವಳಿದು ನಿಶ್ಚಿಂತನಾಗಬೇಕು.
ಆಕಾಶದ ಬೆಳಗು ನೋಡಿ
ಬೆಳಗುಮಯನಾಗಬೇಕು ನೋಡಾ,
ಎಲೆ ಮನವೆ, ಕಪಿಲಸಿದ್ಧ ಮಲ್ಲಿಕಾರ್ಜುನನಲ್ಲಿ.

**– ಸಿದ್ಧರಾಮ**